

# ಚಂದಿರಮಾಮನ ಟೂರು

ಚಂದಿರಮಾಮ ಹೋಗ್ತಾನಂತೆ
ಸಿಂಗಾಪುರದ ಟೂರಿಗೆ
ಒಂದೇ ಪ್ರಶ್ನೆ: ರಜಾ ಚೀಟಿ
ಸಲ್ಲಿಸಬೇಕು ಯಾರಿಗೆ?

ಪುಟ್ಟ ಪುಟ್ಟಿ ಸರಳಾ ಕಮಲಾ
ನೀವೇ ಕೊಡಿ ರಜಾ–
ಚಂದಿರಮಾಮ ಕೇಳ್ತಾ ಇದ್ರೆ
ಮಕ್ಕಳಿಗೆಲ್ಲ ಮಜಾ

ಎಲ್ಲರು ಸೇರಿ ಕೇಳ್ತಿದ್ದಾರೆ:
ರಜಾ ಯಾಕೆ ಬೇಕು?
ಅಮಾವಾಸ್ಯೆ ಹಗಲು ರಾತ್ರಿ
ಹೋಗಿ ಬಾ – ಸಾಕು

ಹೇಳಿ ಕೇಳೀ ಅಮಾವಾಸ್ಯೆ!
ಟೂರಿಗೆ ಹೋಗೋದುಂಟೆ?
ಬೇರೆ ದಿನ ರಜಾ ಕೊಡಿ
ಚಂದಿರಮಾಮನ ತಂಟೆ!

ಚಂದಿರಮಾಮನ ರಜೆ ಇನ್ನೂ
ಮಂಜೂರಾಗಿಲ್ಲ
ಪಾಪ ಅದಕೇ ಅವನು ಇನ್ನೂ
ಟೂರಿಗೆ ಹೋಗಿಲ್ಲ

ಮಕ್ಕಳ ಪ್ರೀತಿಯ ಚಂದಿರಮಾಮ
ಎಲ್ಲೂ ಹೋಗಲ್ಲ
ಹೀಗೇ ಮಕ್ಕಳ ರೇಗಿಸ್ತಾನೆ
ಯಾರಿಗೆ ಗೊತ್ತಿಲ್ಲ?